ಇ)

1. ಪ್ರತಿ ಜಿಲ್ಲೆಯಲ್ಲಿ ಒಬ್ಬರು ಜಿಲ್ಲಾ ಸಮನ್ವಯಾಧಿಕಾರಿಯನ್ನು ನೇಮಿಸಿದೆ.
2. ಚಿಕಿತ್ಸಾ ಪೂರ್ವಾನುಮತಿ ನೀಡಲು ಕನಿಷ್ಟ ಇಬ್ಬರು ತಜ್ಞ ವೈದ್ಯರನ್ನು ನೇಮಿಸಿದೆ.
3. ಅನುಷ್ಠಾನ ಏಜೆನ್ಸಿಯು ಬೆಂಗಳೂರಲ್ಲಿ ಯೋಜನೆಯ ಅನುಷ್ಠಾನಕ್ಕೆ ಪ್ರತ್ಯೇಕ ಕಛೇರಿಯನ್ನು ಹಾಗೂ ಚಿಕಿತ್ಸಾ ಪೂರ್ವಾನುಮತಿಯನ್ನು ಅಂತರ್ಜಾಲದ ಮೂಲಕ ನೀಡಲು ಅಗತ್ಯ ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಅನ್ನು ಹೊಂದಿರುತ್ತದೆ.
4. ಚಿಕಿತ್ಸಾ ಪೂರ್ವಾನುಮತಿ ಹಾಗೂ ನೆಟ್‌ವರ್ಕ್ ಆಸ್ಪತ್ರೆಗಳ ಬಿಲ್ಲುಗಳ ಪರಿಶೀಲನೆಗೆ ಹಾಗೂ ಕಛೇರಿಯ ಇತರೆ ಕೆಲಸಗಳಿಗೆ ಅಗತ್ಯ ಸಿಬ್ಬಂದಿಯನ್ನು ನೇಮಿಸಿದೆ.
5. ಅನುಷ್ಠಾನ ಏಜೆನ್ಸಿ ಯೋಜನೆ ಅನುಷ್ಠಾನಕ್ಕೆ ಅಗತ್ಯವಾದ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ತನ್ನ ಸಿಬ್ಬಂದಿಗೆ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ಈ) ಅನುಷ್ಠಾನ ಏಜೆನ್ಸಿಗೆ 2009–10ನೇ ಸಾಲಿಗೆ ರೂ.50,00,000/–ಗಳ (ಎಲ್ಲಾ ತೆರಿಗೆ ಸೇರಿ) ಸೇವಾ ಶುಲ್ಕವನ್ನು ಟ್ರಸ್ಟ್‌ನಿಂದ ಸಂದಾಯ ಮಾಡಲಾಗುತ್ತದೆ.

ಯಶಸ್ವಿನಿ ಆರೋಗ್ಯ ಯೋಜನೆ

971 (1507) ಶ್ರೀ. ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಶಸ್ವಿನಿ ಟ್ರಸ್ಟ್‌ನಲ್ಲಿ ರಾಜ್ಯದ ವಿವಿಧ ಪ್ರದೇಶಗಳ ಹೆಸರಾಂತ ಐವರು ವೈದ್ಯರುಗಳನ್ನು ಟ್ರಸ್ಟೀ ಎಂದು ನೇಮಿಸಬೇಕಾಗಿದ್ದು, ಹೈದಾರಾಬಾದ್ ಕರ್ನಾಟಕ ಪ್ರದೇಶದಿಂದ ಯಾವುದೇ ವೈದ್ಯರನ್ನು ಟ್ರಸ್ಟಿ ಎಂದು ನೇಮಕ ಮಾಡದಿರಲು ಕಾರಣಗಳೇನು;

ಆ) ಯಾವ ಕಾರಣಕ್ಕಾಗಿ ಎಲಬು ಕೀಲುಗಳ ತಜ್ಞರು (Orthopedic), ಸ್ತ್ರೀರೋಗ ತಜ್ಞರು (Gynaecologisty & Obstetrician), ನರರೋಗ ತಜ್ಞರು (Neurologist), ಮೂತ್ರನಾಳ ತಜ್ಞರು (Urology) ಮಕ್ಕಳ ಚಿಕಿತ್ಸರು (Pediatric Surgeon) ಹಲ್ಲಿನ ಶಸ್ತ್ರ ಚಿಕಿತ್ಸಕ (Dental Surgeon) ರನ್ನು ಟ್ರಸ್ಟಿಯಾಗಿ ನೇಮಿಸಿರುವುದಿಲ್ಲ;

ಇ) ಐದು ಮಂದಿ ಟ್ರಸ್ಟಿಗಳಲ್ಲಿ ಶೇಕಡ 60% (ಮೂರು ಸದಸ್ಯರುಗಳು) ಹೃದಯ ಶಸ್ತ್ರ ಚಿಕಿತ್ಸಕರನ್ನು ಟ್ರಸ್ಟಿಗಳೆಂದು ನೇಮಿಸುವ ಅವಶ್ಯಕತೆಯಿದೆಯೇ; ಹಾಗಿದ್ದಲ್ಲಿ, ಮಕ್ಕಳ ಶಸ್ತ್ರ ಚಿಕಿತ್ಸಕರನ್ನು ಪರಿಗಣಿಸದೆ ಡಿಪ್ಲೋಮೋ ಪದವಿಯ ಮಕ್ಕಳ ತಜ್ಞರನ್ನು ಟ್ರಸ್ಟಿಯಾಗಿ ನೇಮಿಸುವ ಅನಿವಾರ್ಯತೆಯೇನು;

ಈ) ಯೋಜನೆಯ ಅಡಿಯಲ್ಲಿ ವೈದ್ಯಕೀಯ ತಪಾಸಣೆಗಳಿಗೆ ಸೌಲಭ್ಯ ಲಭ್ಯವಿರುವುದಿಲ್ಲ. ಆದರೆ, ಅಂಜಿಯೋಗ್ರಫಿಗೆ ಈ ಸೌಲಭ್ಯವನ್ನು ವಿಸ್ತರಿಸಲಾಗಿರುವುದು ಸರಿಯೇ;

ಉ) ಕೆಲವೊಂದು ಟ್ರಸ್ಟಿಗಳನ್ನು ಕೈಬಿಟ್ಟು ಹೊಸ ಟ್ರಸ್ಟಿಗಳನ್ನು ನೇಮಿಸುವ ಪ್ರಸ್ತಾವನೆಯೇನಾದರೂ ಇದೆಯೇ?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) ಭಾರತೀಯ ಟ್ರಸ್ಟ್ ಅಧಿನಿಯಮ 1882ರಂತೆ ದಿ:10.11.2003 ರಂದು ನೋಂದಾಯಿತವಾಗಿರುವ "ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ಟ್ರಸ್ಟ್" ನಲ್ಲಿ ಐವರು ಹೆಸರಾಂತ ಟ್ರಸ್ಟಿ ವೈದ್ಯರುಗಳಿದ್ದು, ಇವರಲ್ಲಿ ಇಬ್ಬರು ಟ್ರಸ್ಟಿಗಳು ಉತ್ತರ ಕರ್ನಾಟಕ ಭಾಗದವರಾಗಿರುತ್ತಾರೆ. ನೊಂದಾಯಿತ ಟ್ರಸ್ಟ್ ನಿಯಮಗಳಲ್ಲಿ ಯಾವ ಪ್ರದೇಶದಿಂದ ಟ್ರಸ್ಟಿಗಳನ್ನು ನೇಮಕ ಮಾಡಬೇಕೆಂಬ ನಿರ್ದಿಷ್ಟ ನಿಯಮ ಇರುವುದಿಲ್ಲವಾದ್ದರಿಂದ ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಯಾವುದೇ ವೈದ್ಯರನ್ನು ಟ್ರಸ್ಟಿ ಎಂದು ನೇಮಕ ಮಾಡಿರುವುದಿಲ್ಲ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ನೋಂದಾಯಿತ ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ಟ್ರಸ್ಟ್ ನಿಯಮಗಳಲ್ಲಿ ಯಾವ ಯಾವ ವೈದ್ಯಕೀಯ ಕ್ಷೇತ್ರದಿಂದ ಟ್ರಸ್ಟಿಗಳನ್ನು ನೇಮಕಮಾಡಬೇಕೆಂಬ ನಿರ್ದಿಷ್ಟ ನಿಯಮ ಇರುವುದಿಲ್ಲವಾದ್ದರಿಂದ ಎಲಬು ಕೀಲುಗಳ ತಜ್ಞರು (Orthopedic), ಸ್ತ್ರೀರೋಗ ತಜ್ಞರು (Gynaecologisty

& Obstetrician), ನರರೋಗ ತಜ್ಞರು (Neurologist), ಮೂತ್ರನಾಳ ತಜ್ಞರು (Urology) ಮಕ್ಕಳ ಚಿಕಿತ್ಸರು (Pediatric Surgeon) ಹಲ್ಲಿನ ಶಸ್ತ್ರ ಚಿಕಿತ್ಸಕ (Dental Surgeon) ರನ್ನು ಟ್ರಸ್ಟಿಯಾಗಿ ನೇಮಿಸಿರುವುದಿಲ್ಲ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಕರ್ನಾಟಕ ಸರ್ಕಾರವು ಪ್ರಪ್ರಥಮವಾಗಿ ರಾಜ್ಯದ ಗ್ರಾಮೀಣ ಪ್ರದೇಶದ ಸಹಕಾರಿ ರೈತ ವರ್ಗಕ್ಕೆ ಉತ್ತಮ ಗುಣಮಟ್ಟದ ಆರೋಗ್ಯ ಸೌಲಭ್ಯಗಳನ್ನು ಸುಪ್ರಸಿದ್ಧ ಖಾಸಗಿ ಆಸ್ಪತ್ರೆ / ನರ್ಸಿಂಗ್ ಹೋಮ್‌ಗಳ ಮೂಲಕ ಒದಗಿಸುವ ಉದ್ದೇಶದಿಂದ 2003ನೇ ಜೂನ್ ತಿಂಗಳಿಂದ ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ಯೋಜನೆಯನ್ನು ಪ್ರಾರಂಭಿಸಿದೆ. ಯೋಜನೆಯು ಅನುಷ್ಠಾನದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಸಹಕಾರಿ ಇಲಾಖೆಯು ಪ್ರಧಾನ ಕಾರ್ಯದರ್ಶಿ ಇವರ ಅಧ್ಯಕ್ಷತೆಯಲ್ಲಿ ಯಶಸ್ವಿನಿ ಟ್ರಸ್ಟ್ ಅನ್ನು ರಚಿಸಲಾಗಿದ್ದು, ಇದರಲ್ಲಿ ಡಾ॥ ದೇವಿ ಪ್ರಸಾದ್ ಶೆಟ್ಟಿ ಸೇರಿ ಐವರು ವೈದ್ಯಕೀಯ ತಜ್ಞರನ್ನು ನೇಮಿಸಲಾಗಿದೆ.

ಈ) ಯಶಸ್ವಿನಿ ಯೋಜನೆಯಡಿ ಪ್ರಾರಂಭದಲ್ಲಿ 1600 ಶಸ್ತ್ರ ಚಿಕಿತ್ಸೆಗಳ ಸೌಲಭ್ಯದೊಂದಿಗೆ ಪ್ರಾರಂಭಿಸಿರುವುದು ಸರಿಯಷ್ಟೆ. 2006–07ನೇ ಸಾಲಿನಲ್ಲಿ ಗ್ರಾಮೀಣ ಪ್ರದೇಶದ ರೈತರ ಬೇಡಿಕೆ ಮೇರೆಗೆ ದಿನನಿತ್ಯ ಎದುರಿಸುತ್ತಿರುವ ತುರ್ತು ವೈದ್ಯಕೀಯ ಚಿಕಿತ್ಸೆಗಳಾದ ನಾಯಿ ಕಡಿತ, ಹಾವು ಕಡಿತ, ಹೋರಿ ಇರಿತ, ಕೃಷಿ ವಿದ್ಯುತ್ ಉಪಕರಣಗಳನ್ನು ಉಪಯೋಗಿಸುವಾಗ ಆಗುವ ಅಪಘಾತಗಳು, ನೀರಿನಲ್ಲಿ ಮುಳುಗುವಿಕೆ, ಸುಟ್ಟ ಗಾಯಗಳು ವಿಷ ಸೇವನೆ ಮುಂತಾದ ವೈದ್ಯಕೀಯ ತುರ್ತು ಚಿಕಿತ್ಸೆಯನ್ನು ಹಾಗೂ ಅಂಜಿಯೋಗ್ರಫಿ ಸೌಲಭ್ಯವನ್ನು ಗ್ರಾಮೀಣ ಪ್ರದೇಶದ ಜನತೆಯ ಹಿತದೃಷ್ಟಿಯಿಂದ ಯೋಜನೆಯಲ್ಲಿ ಅಳವಡಿಸಲಾಗಿದೆ.

ಉ) ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ಟ್ರಸ್ಟ್‌ನಲ್ಲಿ ಆರು ಜನ ಸರ್ಕಾರದ ಪದನಿಮಿತ್ತ ಹಿರಿಯ ಅಧಿಕಾರಿಗಳು ಹಾಗೂ ಡಾ.ದೇವಿಪ್ರಸದ್ ಶೆಟ್ಟಿ ಇವರುಗಳು ಖಾಯಂ ಟ್ರಸ್ಟಿಗಳಾಗಿರುತ್ತಾರೆ. ಉಳಿದ ನಾಲ್ವರು ಟ್ರಸ್ಟಿಗಳನ್ನು ದಿ: 29.05.2009ರ ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟು ನಿಯಮಕ್ಕೆ ಅನುಸಾರವಾಗಿ ಟ್ರಸ್ಟ್ ಸಭೆಯಲ್ಲಿ ಮೂರು ವರ್ಷಗಳ ಅವಧಿಗೆ ಪುನರ್ ನೇಮಕಮಾಡಿದ್ದು, ಇವರ ಅವಧಿಯು ದಿ: 31.05.2012ಕ್ಕೆ ಅಂತ್ಯವಾಗುತ್ತದೆ. ಆದ್ದರಿಂದ ಈ ಮಧ್ಯೆ ಹೊಸ

ಟ್ರಸ್ಟಿಗಳನ್ನು ನೇಮಕ ಮಾಡಲು ನೋಂದಾಯಿತ ಟ್ರಸ್ಟ್ ನಿಯಮಗಳಲ್ಲಿ ಅವಕಾಶವಿಲ್ಲದಿರುವುದರಿಂದ ಈ ಪ್ರಸ್ತಾಪವು ಸರ್ಕಾರದ ಮುಂದಿರುವುದಿಲ್ಲ.

ತೋಟಗಾರಿಕೆ ಇಲಾಖೆಯ ಯೋಜನೆಗಳು

973 (1262) ಶ್ರೀ ಡಾ॥ ಮಹದೇವಪ್ಪ ಹೆಚ್.ಸಿ. (ಟಿ.ನರಸೀಪುರ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10 ನೇ ಸಾಲಿನ ಆಯವ್ಯಯದಲ್ಲಿ ತೋಟಗಾರಿಕೆ ಇಲಾಖೆಯ Kolar Horticulture College, Horticulture Department (SCP) ಈ ಯೋಜನೆಗಳಿಗೆ ಎಷ್ಟು ಅನುದಾನವನ್ನು ಒದಗಿಸಲಾಗಿದೆ;

ಆ) ಈ ಯೋಜನೆಗಳಿಗೆ ಬಿಡುಗಡೆಯಾದ ಮೊತ್ತ ಎಷ್ಟು; ವಿವರ ನೀಡುವುದು;

ಇ) ವೆಚ್ಚ ಮಾಡದೇ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು)?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ರೂ.500.00 ಲಕ್ಷಗಳು.

ಆ) ರೂ.375.00 ಲಕ್ಷಗಳು.

ಈ ಮೊತ್ತದಲ್ಲಿ ಮಹಾವಿದ್ಯಾಲಯ ಪ್ರಾರಂಭಿಸಲು ವೆಚ್ಚ ಭರಿಸಲಾಗಿದೆ ಮತ್ತು ಮುಖ್ಯ ಕಟ್ಟಡ ಹಾಗೂ ವಿದ್ಯಾರ್ಥಿ ವಸತಿ ಕಟ್ಟಡಗಳನ್ನು ನಿರ್ಮಿಸಲು ಟೆಂಡರ್ ಕರೆಯಲಾಗಿದೆ.

ಇ) ರೂ.175.00 ಲಕ್ಷಗಳು ಉಳಿದಿದೆ ಈ ಮೊತ್ತವನ್ನು ಕಟ್ಟಡ ಕಾಮಗಾರಿಗಳಿಗೆ ವಿನಿಯೋಗಿಸಲಾಗುವುದು.

ಕೃಷಿ ಇಲಾಖೆಯ ಯೋಜನೆಗಳು

974 (1263) ಶ್ರೀ ಡಾ. ಮಹದೇವಪ್ಪ ಹೆಚ್. ಸಿ (ಟಿ. ನರಸೀಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10 ನೇ ಸಾಲಿನ ಆಯವ್ಯಯದಲ್ಲಿ ಕೃಷಿ ಇಲಾಖೆಯ Enrichment of soil fertility, subsidy for crop loan, tribal Area